ಸಾಕ್ಷಿಯನ್ನು ದಿನಾಂಕ:19.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಎದುರುದಾರರ ಪರ ಮಾನ್ಯ ಡಿಜಿಪಿ ರವರಿಂದ:

ಭೂಸ್ವಾಧೀನಾಧಿಕಾರಿಗಳು ನೀಡಿದ ನೋಟೀಸ್ ನನಗೆ ಜಾರಿಯಾಗಿರುತ್ತದೆ. ಆ ಸಂದರ್ಭದಲ್ಲಿ ನನ್ನ ತಾಯಿಗೆ ಹುಷಾರಿಲ್ಲದಿದ್ದ ಕಾರಣ ನಾವು ಪರಿಹಾರದ ಹಣವನ್ನು ಪಡೆದುಕೊಂಡಿರುವುದಿಲ್ಲ. ಭೂಸ್ವಾಧೀನಾವಾಗಿದ್ದ ಸಂದರ್ಭದಲ್ಲಿ ಸ್ವತ್ತು ನನ್ನ ತಾಯಿ ಪುಟ್ಟಮ್ಮ ರವರ ಹೆಸರಿನಲ್ಲಿತ್ತು. ಸರ್ವೆ ನಂ.29/11 ರಲ್ಲಿ ನನಗೆ ಸೇರಿದ ಒಟ್ಟು 15.12 ಗುಂಟೆ ಜಮೀನಿದ್ದು, ಅದರ ಪೈಕಿ 0.11.12 ಗುಂಟೆ ಜಮೀನು ಭೂಸ್ವಾಧೀನವಾಗಿರುತ್ತದೆ. ನನ್ನ ತಾಯಿ ತೀರಿಕೊಂಡ ನಂತರ ಉಳಿದ ಸ್ವತ್ತು ನಮ್ಮ ಜಂಟಿ ಹೆಸರಿನಲ್ಲಿರುತ್ತದೆ. ನನ್ನ ತಾಯಿಗೆ ಸಂಬಂಧಪಟ್ಟ ಡೆತ್ ಸರ್ಟಿಫಿಕೇಟ್ ಹಾಜರುಪಡಿಸಿರುತ್ತೇನೆ. ಭೂಸ್ವಾಧೀನವಾಗಿದ್ದ ಜಮೀನಿನ ಮೇಲೆ ಕೃಷಿ ಪತ್ತಿನ ಸಹಕಾರ ಸಂಘದಿಂದ ಸಾಲವನ್ನು ಪಡೆದಿರುತ್ತೇನೆ. ನನ್ನ ತಾಯಿ ಬದುಕಿದ್ದ ಸಮಯದಲ್ಲಿ ಒಂದು ಲಕ್ಷ ಹದಿನೈದು ಸಾವಿರ ರೂಗಳನ್ನು ಸಾಲವಾಗಿ ಪಡೆದಿರುತ್ತೇನೆ. ಈಗ ಭೂಸ್ವಾಧೀನವಾಗಿರುವ ಜಮೀನಿನ ಮೇಲೆ 35 ಸಾವಿರ ಸಾಲ ಬಾಕಿ ಇರುತ್ತದೆ. ಸದರಿ ಸಾಲವನ್ನು ನಾನೇ ಕಟ್ಟುತ್ತೇನೆ. ನಮ್ಮ ಜಮೀನಿನ ಮೇಲೆ ಇರುವ ಸಾಲವನುನ ತೀರಿಸಿ ನಂತರ ಪರಿಹಾರದ ಹಣವನ್ನು ಪಡೆಯಬೇಕು ಎಂದು ಸೂಚಿಸಿದರೆ ಸಾಕ್ಷಿ ನಾನು ಸಾಲವನ್ನು ಕಟ್ಟುತ್ತೇನೆ ಎಂದು ನುಡಿಯುತ್ತಾರೆ. ಭೂಸ್ವಾಧೀನವಾಗಿರುವ ಜಮೀನಿನ ಮೇಲೆ ಯಾವುದೇ ವ್ಯಾಜ್ಯ ಬೇರೆ ನ್ಯಾಯಾಲಯದಲ್ಲಿರುವುದಿಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.